ಸಾಕ್ಷಿದಾರರನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 07.02.2024

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಪಿ.ಆರ್. ಎಂ. ವಕೀಲರಿಂದಃ**

1) ನನಗೆ ಈ ದಾವಾದ ಆಸ್ತಿ ನಂಬರ ಹೇಳಲು ಬರುವುದಿಲ್ಲ. ದಾವಾ ಆಸ್ತಿ ಚೆಕ್ಕು ಬಂದಿ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿ ಕಲ್ಲು ಮತ್ತು ಮಣ್ಣಿನಿಂದ ಕಟ್ಟಿದ ಗೋಡೆ ಮತ್ತು ಸಿಮೆಂಟ್ ಶೀಟ ಇದೆ ಎಂದರೆ ಸರಿ. ಸದರಿ ದಾವಾ ಆಸ್ತಿಯಲ್ಲಿ ಪ್ರತಿವಾದಿ ಮತ್ತು ಆತನ ಕುಟುಂಬದವರು ವಾಸವಾಗಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಮತ್ತು ಆತನ ಕುಟುಂಬದವರು 2003 ರಿಂದ ದಾವಾ ಆಸ್ತಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. 2003 ರಿಂದ 2020 ರವರೆಗೆ ಪ್ರತಿವಾದಿ ದಾವಾ ಆಸ್ತಿ ಕರ ಆಕರಣೆ ತುಂಬಿರುತ್ತಾರೆ ಎಂದರೆ ಸರಿ. ಸದರಿ ದಾವಾ ಆಸ್ತಿಯಲ್ಲಿ ನಾವು ಎಂದಿಗೂ ವಾಸವಾಗಿರುವುದಿಲ್ಲ ಎಂದರೆ ಸರಿ.

2) ನನ್ನ ತಂದೆ ದಾವಾ ಆಸ್ತಿಯಲ್ಲಿ ಮನೆ ಕಟ್ಟಿರುತ್ತಾರೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯಲ್ಲಿ ನಾವು ವಾಸವಾಗಿರುತ್ತೇವೆ ಎಂದು ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ಪ್ರತಿವಾದಿಯ ಮಗಳ ಹೆಸರಿಗೆ ಬೆಟ್ಟದ ಮಲ್ಲೇಶ್ವರ ನಗರದಲ್ಲಿ ಪ್ಲಾಟ ಇದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಯ ಮಗಳ ಹೆಸರಿಗೆ ಬೆಟ್ಟದ ಮಲ್ಲೇಶ್ವರ ನಗರದಲ್ಲಿ ಯಾವುದೇ ಪ್ಲಾಟ ಇಲ್ಲ ಎಂದರೆ ಸರಿಯಲ್ಲ.

3) ಪ್ರತಿವಾದಿಯ ಮಗಳ ಹೆಸರಿಗೆ ಬೆಟ್ಟದ ಮಲ್ಲೇಶ್ವರ ನಗರದಲ್ಲಿ ಪ್ಲಾಟ ಇದ್ದು ಅದರಲ್ಲಿ ಮನೆ ಕಟ್ಟುತ್ತಿದ್ದಾಳೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಯು ಮಗಳ ಹೆಸರಿಗೆ ಬೆಟ್ಟದ ಮಲ್ಲೇಶ್ವರ ನಗರದಲ್ಲಿ ಪ್ಲಾಟ ಇರುವುದಿಲ್ಲ ಅದರಿಂದ ಮನೆ ಕಟ್ಟಿರುವುದಿಲ್ಲ ಎಂದರೆ ಸರಿ. ಪ್ರತಿವಾದಿ ಮಗಳು ಮನೆ ಕಟ್ಟುವ ಸಾಮಾನುಗಳು ದಾವಾ ಆಸ್ತಿಯಲ್ಲಿ ಇಡುತ್ತೇವೆ ಅಂತಾ ನಮ್ಮ ತಂದೆಯ ಪರವಾನಿಗೆ ಪಡೆದಿರುತ್ತಾರೆ ಅಂತಾ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

4) ದಾವಾ ಆಸ್ತಿಯಲ್ಲಿ ನಾವು ವಾಸವಾಗಿದ್ದಿಲ್ಲ ಮತ್ತು ಪ್ರತಿವಾದಿಗೆ ಖಾಲಿ ಮಾಡಿ ಕೊಟ್ಟಿರುವುದಿಲ್ಲ. ಪ್ರತಿವಾದಿ ನನಗೆ ದೂರಿನಿಂದ ಸಂಬಂಧಿಕ ಆಗಬೇಕು ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಮಗಳ ಮನೆ ಕಟ್ಟುವುದು ಮುಗಿದ ಮನೆ ಮನೆ ಬಿಡುತ್ತೇವೆ ಅಂತಾ ಸುಳ್ಳು ಬರೆಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಮಗಳ ಮನೆ ಕಟ್ಟಿ ಹಣ ಖಾಲಿಯಾಗಿದ್ದು, ಒಂದು ತಿಂಗಳ ನಂತರ ಮನೆ ಖಾಲಿ ಮಾಡುತ್ತೇನೆ ಅಂತಾ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

5) ನಂತರ ಮನೆಗೆ ಸುಣ್ಣ ಬಣ್ಣ ಬಳೆದುಕೊಡುತ್ತೇನೆ ಅಂತಾ ಪ್ರತಿವಾದಿ ಹೇಳಿರುತ್ತಾನೆ ಅಂತಾ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಮಗೂ ಮತ್ತು ಪ್ರತಿವಾದಿಯ ವ್ಯಾಜ್ಯದ ಬಗ್ಗೆ ಹಿರಿಯರನ್ನು ಕೂಡಿಸಿರುವುದಿಲ್ಲ. ಹಿರಿಯರ ಮಾತಿಗೆ ಬೆಲೆ ಕೊಡದೇ ಮನೆಯನ್ನು ಬಿಟ್ಟು ಕೊಡುವುದಿಲ್ಲ ಅಂತಾ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ವಕೀಲರ ಮೂಲಕ ವಕೀಲರಿಗೆ ನೋಟೀಸು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನೋಟೀಸು ಪ್ರತಿವಾದಿಗೆ ಜಾರಿ ಆಗಿರುವುದಿಲ್ಲ ಎಂದರೆ ಸರಿಯಲ್ಲ.

6) ದಾವಾ ಆಸ್ತಿ ಈ ದಾವೆ ಸಲ್ಲಿಸುವ ಸಮಯದಲ್ಲಿ ಹತ್ತು ಲಕ್ಷ ಬೆಲೆ ಬಾಳುತ್ತದೆ ಎಂದರೆ ಆಗಬಹುದು ಎಂದು ನುಡಿಯುತ್ತಾರೆ. ದಾವಾ ಆಸ್ತಿ ಮಾರುಕಟ್ಟೆಯ ಬೆಲೆಯ ಮೇಲೆ ಕೋರ್ಟ ಫೀ ಕಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ನಾವೇ ಮಾಲೀಕರು ಎಂದು ಠರಾಯಿಸಲು ಕೇಳಿರುವುದಿಲ್ಲ ಎಂದರೆ ಸರಿ. ಈ ಬಗ್ಗೆ ಸುಳ್ಳು ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನಮ್ಮ ತಂದೆಗೆ ಪುರಸಭೆಯವರು ನೀಡಿದ ಆಸ್ತಿ ಎಂದರೆ ಸರಿ. ಪುರಸಭೆಯವರು ಹಕ್ಕುಪತ್ರ ನೀಡಿರುತ್ತಾರೆ ಎಂದರೆ ಸರಿ. ಸದರಿ ಮೂಲ ಹಕ್ಕು ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಮ್ಮ ತಂದೆಗೆ ನೀಡಿದ ಹಕ್ಕು ಪತ್ರವನ್ನು ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ಎಂದರೆ ಸರಿ.

7) ದಿಃ 29.07.2002 ರಂದು ದಾವಾ ಆಸ್ತಿ ಖಾಲಿ ಜಾಗ ಇತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಪ್ರತಿವಾದಿಗೆ ದಿಃ 29.07.2002 ರಂದು 14,500/- ರೂಪಾಯಿಗಳಿಗೆ ಮಾರಾಟ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನದಂದು ತನ್ನ ಗೃಹಕೃತ್ಯದ ಅಡಚಣೆ ಸಲುವಾಗಿ ಪ್ರತಿವಾದಿ ಕಡೆಯಿಂದ 14,500/- ರೂಪಾಯಿಗಳನ್ನು ನನ್ನ ತಂದೆ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ 14,500/- ರೂಪಾಯಿಗಳನ್ನು ಪಡೆದುಕೊಂಡು ಪಂಚರ ಸಮಕ್ಷಮ ಸಂಚಕಾರ ಪತ್ರ ಬರೆದುಕೊಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನದಂದು ದಾವಾ ಆಸ್ತಿಯನ್ನು ಪ್ರತಿವಾದಿಗೆ ಕಬ್ಜಾ ಕೊಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸನ್ 2002-03 ರಲ್ಲಿ ಸುಮಾರು 3,00,000/- ರೂಪಾಯಿಗಳನ್ನು ಖರ್ಚು ಮಾಡಿ ದಾವಾ ಆಸ್ತಿಯಲ್ಲಿ ಮನೆಯನ್ನು ಪ್ರತಿವಾದಿ ಕಟ್ಟಿ ಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ತನ್ನ ಸದಸ್ಯರೊಂದಿಗೆ 2003 ರಿಂದ ಇಲ್ಲಿಯವರೆಗೆ ದಾವಾ ಆಸ್ತಿಯಲ್ಲಿ ವಾಸವಾಗಿದ್ದಾನೆ ಎಂದರೆ ನಾನು ಚಿಕ್ಕವನಿದ್ದೆ ಎಂದು ಸಾಕ್ಷ್ಯ ನುಡಿಯುತ್ತಾರೆ.

8) ಪ್ರತಿವಾದಿ ಸುಮಾರು 12 ವರ್ಷಗಳ ಮೇಲ್ಪಟ್ಟು ದಾವಾ ಆಸ್ತಿಯಲ್ಲಿ ವಾಸವಾಗಿದ್ದರಿಂದ ವಿರುದ್ಧ ನಾತೆಯಿಂದ ಮಾಲೀಕನು ಅಂತಾ ವಾಸವಾಗಿದ್ದಾನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮನೆಯನ್ನು ನಮ್ಮ ತಂದೆ ಕಟ್ಟಿಸಿರುತ್ತಾರೆ. ಈ ಬಗ್ಗೆ ಸುಳ್ಳು ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ. ನಾವು ಪ್ರತಿವಾದಿಯ ವಿರುದ್ಧ ತಾಕೀದಿ ಪಡೆಯಲು

ಅರ್ಹನಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 12 ವರ್ಷ ಮೇಲ್ಪಟ್ಟು ದಾವಾ ಆಸ್ತಿಯಲ್ಲಿ ವಾಸವಾಗಿದ್ದರಿಂದ ದಾವೆಯನ್ನು ವಜಾ ಆಗುತ್ತದೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/-
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.